# ಭಾರತೀಯ ನಾರಿಯರ ಆಧ್ಯಾತ್ಮಿಕ ತುಡಿತ

◆ **ಕುಮಾರಿ ಸ್ವರ್ಣಗೌರಿ**

ಹಿಂದೂಧರ್ಮಶಾಸ್ತ್ರಗಳು ಸ್ತ್ರೀ ಪುರುಷರಿಬ್ಬರಿಗೂ ಸಮಾನ ಸ್ಥಾನವಿತ್ತಿವೆ. ಶಾಸನಕಾರ ಮನುವೂ ಕೂಡ ಇದನ್ನು ಅನುಮೋದಿ ಸುತ್ತ, "ಸೃಷ್ಟಿಪೂರ್ವದಲ್ಲಿ ಪ್ರಜಾಪತಿಯು ತನ್ನನ್ನೇ ಎರಡು ಭಾಗಗಳನ್ನಾಗಿ ವಿಭಜಿಸಿಕೊಂಡ, ಒಂದು ಸ್ತ್ರೀ, ಮತ್ತೊಂದು ಪುರುಷ" ಎಂದಿದ್ದಾನೆ. ಮತ್ತೂ ಮುಂದುವರಿಯುತ್ತಾ, "ಎಲ್ಲಿ ಸ್ತ್ರೀಯರನ್ನು ಗೌರವಿಸುವರೋ ಅಲ್ಲಿ ದೇವತೆಗಳೂ ಸುಪ್ರೀತ ರಾಗುತ್ತಾರೆ, ಎಲ್ಲಿ ಅವರು ಅಗೌರವಕ್ಕೆ ಪಾತ್ರರಾಗುತ್ತಾರೋ ಅಲ್ಲಿ ಎಲ್ಲ ಕೆಲಸಗಳೂ ನಿರರ್ಥಕವಾಗುವುವು" ಎಂದು ಸ್ಪಷ್ಟವಾಗಿ ಸಾರಿದ್ದಾನೆ. ಭಾರತದಲ್ಲಿ ದೇವರನ್ನೂ ಕೂಡ 'ಅರ್ಧನಾರೀಶ್ವರ' – ಅರ್ಧಸ್ತ್ರೀ, ಅರ್ಧ ಪುರುಷ ಎಂದು ಪೂಜಿಸುವುದು ವಾಡಿಕೆ.

ಸ್ತ್ರೀಯರಿಗೆ ಸ್ವಾತಂತ್ರ್ಯವಿರಬಾರದು, ಆಕೆ ಅಬಲೆ; ಬಾಲ್ಯದಲ್ಲಿ ತಂದೆತಾಯಿಗಳ, ಯೌವನದಲ್ಲಿ ಪತಿಯ ಹಾಗೂ ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿರಬೇಕು ಎಂಬ ಭಾವನೆಗಳೆಲ್ಲಾ ಮನುವಿಗೆ ಮಾತ್ರ ಇರಲಿಲ್ಲ; ಅದು ಸರ್ವೇ ಸಾಮಾನ್ಯವಾದ ಜನಾಭಿಪ್ರಾಯ ವಾಗಿತ್ತು. ಆದರೆ ವೈದಿಕ ಕಾಲದಲ್ಲೇ ವಿದ್ಯಾಭ್ಯಾಸ ಹಾಗೂ ಆಡಳಿತ ಮುಂತಾದ ಕ್ಷೇತ್ರಗಳಲ್ಲಿ ಸ್ತ್ರೀ ಪುರುಷರಿಬ್ಬರಿಗೂ ಸಮಾನತೆ ಯನ್ನು ನೀಡಲಾಗಿತ್ತು. "ಪತಿ ಹಾಗೂ ಪತ್ನಿಯರಿಬ್ಬರೂ ಒಂದೇ ವಸ್ತುವಿನ ಎರಡು ಸಮಾನ ಭಾಗಗಳಾದ ಕಾರಣ ಎಲ್ಲದರಲ್ಲೂ ಇಬ್ಬರಿಗೂ ಸಮಾನ ಹಕ್ಕಿದೆ; ಆದ್ದರಿಂದ ಧಾರ್ಮಿಕ ಹಾಗೂ ವ್ಯಾವಹಾರಿಕ ಪ್ರಪಂಚಗಳೆರಡರಲ್ಲೂ ಇಬ್ಬರಿಗೂ ಸಮಾನವಾದ ಪಾತ್ರವಿದೆ" ಎನ್ನುತ್ತದೆ ಬೃಹದಾರಣ್ಯಕ ಉಪನಿಷತ್ತು (ಬೃ.ಉ. ೫.೬೧.೮) ಮಹಾ ನಿರ್ವಾಣ ತಂತ್ರದಲ್ಲಿ (೮.೪೭) **ಕನ್ಯಾಪ್ಯೇವಂ ಪಾಲನೀಯಾ ಶಿಕ್ಷನೀಯಾऽತಿಯತ್ನತಃ** – **"ಹೆಣ್ಣುಮಕ್ಕಳಿಗೂ ವಿದ್ಯಾಭ್ಯಾಸವನ್ನು ನೀಡಿ ಅತಿ ಜಾಗರೂಕತೆಯಿಂದ ಬೆಳೆಸಬೇಕು"** ಎಂದು ಹೇಳಲಾಗಿದೆ. ಉಪನಯನ, ಗಾಯತ್ರಿ ಮಂತ್ರ ಉಪಾಸನೆ, ಬ್ರಹ್ಮಚರ್ಯೆಗಳನ್ನು ಹೆಣ್ಣುಮಕ್ಕಳಿಗೂ ವಿಧಿಸಲಾಗಿತ್ತು. ಹಿಂದೂ ಧರ್ಮದ ವೇದಗಳಲ್ಲಿರುವಂತೆ ಪ್ರಪಂಚದ ಇನ್ನಾವುದೇ ಧಾರ್ಮಿಕ ಗ್ರಂಥಗಳೂ ಸ್ತ್ರೀ, ಪುರುಷರಿಬ್ಬರಿಗೂ ಈ ರೀತಿಯ ಸಮಾನತೆಯನ್ನು ನೀಡಿಲ್ಲ.

ಈ ಹಿನ್ನೆಲೆಯಲ್ಲಿ ಭಾರತೀಯ ನಾರಿಯರು ನಡೆದುಬಂದ ಆಧ್ಯಾತ್ಮಿಕ ಹಾದಿಯನ್ನು ಸ್ವಲ್ಪ ವಿಶ್ಲೇಷಿಸೋಣ.

**ವೈದಿಕ ಯುಗ:** ವೈದಿಕ ಯುಗದಲ್ಲಿ ವೇದಾಧ್ಯಯನದ ಹೆಬ್ಬಾಗಿಲನ್ನು ಸ್ತ್ರೀಯರಿಗೂ ತೆರೆದಿಟ್ಟ ಕಾರಣ ಸ್ತ್ರೀಯರಲ್ಲೂ ವಿದ್ವಾಂಸರು, ತತ್ತ್ವಜ್ಞಾನಿಗಳು, ಚತುರವಾದಿಗಳು ಇದ್ದರು. ವೈದಿಕಯುಗದ ಪೂರ್ವದಲ್ಲಿ ಹೆಣ್ಣುಮಕ್ಕಳಿಗೆ ಮನೆ ಯಲ್ಲಿಯೇ ತಂದೆಯು ವಿದ್ಯಾಭ್ಯಾಸ ನೀಡುವ ಕ್ರಮವಿತ್ತು. ಕೆಲವರು 'ಛಾತ್ರಶಾಲೆ'ಗಳಲ್ಲಿದ್ದು ಜ್ಞಾನಾರ್ಜನೆ ಮಾಡು ತ್ತಿದ್ದರು. ಮೀಮಾಂಸೆ, ತತ್ತ್ವಜ್ಞಾನಗಳಲ್ಲಿ ಸ್ತ್ರೀಯರೂ ಪರಿಣತಿ ಪಡೆದಿದ್ದರು. ಇವರಲ್ಲಿ ಕೆಲವರು ವೈವಾಹಿಕ ಜೀವನದ ಸುಖವನ್ನು ತ್ಯಜಿಸಿ, ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ದ್ದರು.

ಋಗ್ವೇದದಲ್ಲಿ ಆಧ್ಯಾತ್ಮಿಕ ಜೀವನದ ಉತ್ತುಂಗ ಶಿಖರ ವನ್ನೇರಿದ ಅನೇಕ ಸ್ತ್ರೀಯರನ್ನು ಕಾಣಬಹುದು. ಅವರನ್ನು ಸತ್ಯಾನ್ವೇಷಣೆಯ ದ್ರಷ್ಟಾರರು, ಆಚಾರ್ಯ, ಋಷಿಯಾರ್ಣಿ ಎಂದು ಕರೆಯುತ್ತಿದ್ದರು. ಋಗ್ವೇದದ ಅನೇಕ ಸೂಕ್ತಗಳನ್ನು ಬ್ರಹ್ಮವಾದಿನಿಯರೇ ರಚಿಸಿದ್ದಾರೆ. ಇವರಲ್ಲೆಲ್ಲಾ ಅಂಭೃಣಿ ಋಷಿಯ ಮಗಳಾದ ವಾಕ್ ಎಂಬುವಳನ್ನು ಅತ್ಯಂತ ಶ್ರೇಷ್ಠಳೆಂದು ಪರಿಗಣಿಸಲಾಗಿದೆ. ಆಕೆಯು ರಚಿಸಿದ 'ದೇವೀ ಸೂಕ್ತ' ಈಗಲೂ ಪ್ರಚಲಿತ. ಬ್ರಹ್ಮಜ್ಞಾನಿಯಾದ ಆಕೆಯು ತಲುಪಿದ ಆತ್ಯಂತಿಕ ಸ್ಥಿತಿಯನ್ನು ಈ ಮಾತುಗಳು ಎಷ್ಟು ಸುಂದರವಾಗಿ ಸೆರೆ ಹಿಡಿದಿವೆ: "ನಾನು ಪರಮೋತ್ಕೃಷ್ಟ ಸಾಮ್ರಾಜ್ಞಿ .. ಎಲ್ಲರೂ ತಿನ್ನುವುದು, ನೋಡುವುದು, ಉಸಿರಾಡುವುದು, ಕೇಳುವುದು ನನ್ನ ಮೂಲಕವೇ. ಎಲ್ಲ ವನ್ನೂ ಸೃಷ್ಟಿಸಿ, ಕ್ಷಣಾರ್ಧದಲ್ಲಿ ನಾಶಗೊಳಿಸುವವಳೂ ನಾನೇ. ಈ ಭೂಲೋಕ, ಸ್ವರ್ಗಲೋಕಗಳನ್ನೆಲ್ಲಾ ಮೀರಿ ನಾನು ನಿಂತಿರುವೆ – ನನ್ನ ಮಹಿಮೆ ಅಪಾರ" (ಋಗ್ವೇದ ೧೦.೧೨೫). ಈ ವ್ಯಾವಹಾರಿಕ ಪ್ರಪಂಚವನ್ನು ಮೀರಿ ಆಧ್ಯಾತ್ಮಿಕ ಆದರ್ಶದಲ್ಲಿ ನೆಲೆನಿಂತ ವಿಶ್ವಾವರಾ, ಶಾಶ್ವತೀ, ಅಪಾಲಾ, ಘೋಷಾ, ಅದಿತಿ ಮುಂತಾದ ಬ್ರಹ್ಮವಾದಿನಿ ಯರು ಸೂಕ್ತಗಳನ್ನು ರಚಿಸುತ್ತಾ, ಹುಟ್ಟು–ಸಾವು ಜೀವಾತ್ಮ –ಪರಮಾತ್ಮರ ನಡುವಿನ ಸಂಬಂಧ ಮುಂತಾದ ಸೂಕ್ಷ್ಮವೂ ಅತಿ ಕ್ಲಿಷ್ಟವೂ ಆದ ಸಮಸ್ಯೆಗಳ ಬಗ್ಗೆ ತತ್ತ್ವಜ್ಞಾನಿಗಳೊಡನೆ ಚರ್ಚೆ, ವಾದಗಳಲ್ಲಿ ತೊಡಗಿ ಪ್ರಸಿದ್ಧ ಚಿಂತಕರನ್ನೂ ವಾದ ಗಳಲ್ಲಿ ಪರಾಭವಗೊಳಿಸಿದ್ದಾರೆ.

**ಉಪನಿಷತ್ ಯುಗ:** ಈ ಯುಗದಲ್ಲಿಯೂ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಅತ್ಯುನ್ನತ ಮಟ್ಟವನ್ನು ತಲುಪಿದ ಸ್ತ್ರೀಯರನ್ನು ಕಾಣಬಹುದು. ಕೇವಲ ಬ್ರಹ್ಮ ವಾದಿನಿಯರು ಮಾತ್ರವಲ್ಲದೆ ಗೃಹಿಣಿಯರೂ ಕೂಡ

ಭಾರತದ ಆಧ್ಯಾತ್ಮಿಕ ಪರಂಪರೆಯಲ್ಲಿ ನಾರೀಕುಲ ವಹಿಸಿದ ಪ್ರಭಾವಶಾಲಿ ಪಾತ್ರದ ಒಂದು ವಿಹಂಗಮ ನೋಟವನ್ನು ನೀಡಿರುವ ಲೇಖಕಿ ಮೈಸೂರು ರಾಮಕೃಷ್ಣ ಆಶ್ರಮದ ನಿಕಟ ಭಕ್ತರು.

ತಾತ್ತ್ವಿಕ ಚಿಂತನೆಗಳಲ್ಲಿ ತೊಡಗಿದ್ದರು ಎಂಬುದು ನಮ್ಮನ್ನು ಚಕಿತಗೊಳಿಸುವುದು. ತನ್ನಿಬ್ಬರು ಪತ್ನಿಯರಾದ ಕಾತ್ಯಾಯಿನಿ ಹಾಗೂ ಮೈತ್ರೇಯಿಯರ ನಡುವೆ ಸಂಪತ್ತನ್ನೆಲ್ಲಾ ಹಂಚಿ ವಾನಪ್ರಸ್ಥಕ್ಕೆ ಹೊರಟ ಬ್ರಹ್ಮಜ್ಞಾನಿ ಯಾಜ್ಞವಲ್ಕ್ಯರಿಗೆ ಮೈತ್ರೇಯಿಯು ಕೇಳಿದ, "ಈ ಭೂಮಂಡಲದಲ್ಲಿರುವ ಎಲ್ಲ ಸಂಪತ್ತಿನ ಒಡೆಯಳಾದರೆ, ನಾನು ಅಮೃತತ್ವವನ್ನು ಪಡೆಯುವೆನೆ?" ಎಂಬ ಪ್ರಶ್ನೆಯಲ್ಲಿ ಆಕೆಯ ಜ್ಞಾನದಾಹ ಅಡಗಿರುವುದು ವ್ಯಕ್ತವಾಗದಿರದು.

ಬ್ರಹ್ಮಜ್ಞಾನಿ ಯಾಜ್ಞವಲ್ಕ್ಯರನ್ನೇ ತುಂಬಿದ ಸಭೆಯಲ್ಲಿ ಅತ್ಯಂತ ಕ್ಲಿಷ್ಟಕರವಾದ ತಾತ್ತ್ವಿಕ ಪ್ರಶ್ನೆಗಳಿಂದ ತಬ್ಬಿಬ್ಬುಗೊಳಿಸಿದ ಬ್ರಹ್ಮಚಾರಿಣಿ ಗಾರ್ಗಿಯನ್ನು ಆ ಯುಗದ ಅತಿ ಶ್ರೇಷ್ಠ ಆಚಾರ್ಯಾಣಿ ಎಂದು ಪರಿಗಣಿಸಲಾಗಿತ್ತು. ಸ್ತ್ರೀಯರೂ ಕೂಡ ತಾತ್ತ್ವಿಕ ಚರ್ಚೆಗಳಲ್ಲಿ ಭಾಗವಹಿಸುವಷ್ಟು ಬೌದ್ಧಿಕ ಪ್ರೌಢಿಮೆಯನ್ನು ಪಡೆದಿದ್ದರು.

**ಮಹಾಕಾವ್ಯಗಳ ಯುಗ:** ಮಹಾಕಾವ್ಯಗಳ ಯುಗಕ್ಕೆ ಬಂದರೆ, ರಾಮಾಯಣದಲ್ಲಿನ ಸ್ತ್ರೀಯರನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಅನಸೂಯಾ, ಶಬರಿ, ಸ್ವಯಂಪ್ರಭಾ, ಅಹಲ್ಯಾ ಮುಂತಾದ ಸ್ತ್ರೀಯರು ಈ ಪ್ರಪಂಚವನ್ನು ತ್ಯಜಿಸಿ, ತೀವ್ರವಾದ ಸಾಧನೆಯಲ್ಲಿ ತೊಡಗಿಸಿಕೊಂಡು ಸಂತರೆಂದು ಪ್ರಸಿದ್ಧರಾದರು. ಮಂಡೋದರೀ, ಸರಮಾ, ತ್ರಿಜಟಾ, ತಾರಾ, ದಶರಥನ ಮೂವರು ಪತ್ನಿಯರು, ಸೀತಾದೇವಿ ಮುಂತಾದ ಸ್ತ್ರೀಯರು ಸಮಾಜದ ನಡುವೆ ಸಂಸಾರದಲ್ಲಿದ್ದುಕೊಂಡೇ ಆಧ್ಯಾತ್ಮಿಕತೆಯ ಗಿರಿಶಿಖರವನ್ನೇರಿದರು. ಹತ್ತು ವರ್ಷಗಳ ಕಾಲ ಕ್ಷಾಮದಿಂದ ಪೀಡಿತರಾದ ಜನರಿಗೆ ಒಮ್ಮೆ ಅನಸೂಯೆಯು ತನ್ನ ತಪಶ್ಶಕ್ತಿಯಿಂದ ಹಣ್ಣು, ಹಂಪಲುಗಳನ್ನು ಸೃಷ್ಟಿಸಿ ಕೊಟ್ಟುದಲ್ಲದೆ, ಗಂಗೆಯು ಹರಿಯುವಂತೆ ಮಾಡಿದಳು! ಹೀಗೆ ತನ್ನ ಕಠೋರ ತಪಸ್ಸಿನ ಫಲವನ್ನೆಲ್ಲಾ ಇತರರ ಕ್ಷೇಮಕ್ಕಾಗಿ ವಿನಿಯೋಗಿಸಿದ ತಪಸ್ವಿನಿ ಅನಸೂಯೆ.

ಅನುಸೂಯೆ ಪತಿಯ ಸೇವೆಯಿಂದ ತನ್ನ ಆತ್ಯಂತಿಕ ಗುರಿಯನ್ನು ತಲುಪಿದ್ದರೆ, ಶಬರಿಯು ಋಷಿಮುನಿಗಳ ಸೇವೆಯಿಂದ ಆಧ್ಯಾತ್ಮಿಕ ಸೋಪಾನವನ್ನು ಏರಿದಳು. ಮಾತಂಗ ಋಷಿಗಳ ಬೆವರಿನ ಹನಿಗಳು ಕೆಳಗೆ ಬೀಳುವ ಮುನ್ನವೇ ಬಾಡದ ಹೂಮಾಲೆಗಳಾಗುತ್ತಿದ್ದವಂತೆ! ಎಂತಹ ತಪಶ್ಶಕ್ತಿ!! ಇನ್ನು ಅವರ ಮಾತುಗಳಿಗೆ ಎಂತಹ ಮೌಲ್ಯವಿರಬಹುದು? ಮಾತಂಗ ಋಷಿಗಳು ರಾಮ ಬರುವನೆಂದೂ, ಆಕೆಯನ್ನು ಸ್ವೀಕರಿಸುವನೆಂದೂ ಹೇಳಿದ ವಚನಕ್ಕೆ ಶ್ರದ್ಧೆಯಿಂದ ತಲೆಬಾಗಿ ಕಾಯತೊಡಗಿದಳು. ದಿನಗಳು, ತಿಂಗಳುಗಳು, ವರ್ಷಗಳು ಉರುಳಿದವು. ಆದರೆ ಶಬರಿಯ ಶ್ರದ್ಧೆ ಮಾತ್ರ ಬತ್ತಲಿಲ್ಲ. ಕೊನೆಗೂ ರಾಮ ಬಂದಾಗ ಶಬರಿಯು ನೂರು ವರ್ಷಗಳ ಹೊಸಿಲನ್ನು ಮುಟ್ಟುವವಳಿದ್ದಳು! ಇಂತಹ ಋಷಿಮುನಿಗಳ ಸೇವೆಯಿಂದ ಶಬರಿಯು ಕೃತಕೃತ್ಯಳಾದಳು; ಅತಿ ಶ್ರೇಷ್ಠ ಸಂತಳೆನಿಸಿದಳು. ವಿದ್ವತ್ತು, ಪಾಂಡಿತ್ಯ, ಜಾತಿ, ಕುಲ, ಸಂಪ್ರದಾಯಗಳು ಆವಶ್ಯಕವಲ್ಲ. ಕೇವಲ ಸರಳತೆ, ಶ್ರದ್ಧೆ, ಮುಗ್ಧತೆ, ಭಕ್ತಿಗಳಿಂದ ಸಾಕ್ಷಾತ್ಕಾರವನ್ನು ಪಡೆಯಬಹುದು ಎಂಬುದಕ್ಕೆ ಆಕೆಯ ಜೀವನ ಒಂದು ಜ್ವಲಂತ ನಿದರ್ಶನ.

ಸೀತಾದೇವಿ ಎಂಬ ಹೆಸರೇ ಮೈಮನಗಳನ್ನು ಪವಿತ್ರಗೊಳಿಸುವುದು. "ಒಳ್ಳೆಯ, ಪರಿಶುದ್ಧವಾಗಿರುವ, ಪವಿತ್ರವಾಗಿರುವ ಪ್ರತಿಯೊಂದಕ್ಕೂ ಸೀತೆ ಎಂದು ಹೆಸರು" ಎಂದು ಪಂಚಕನ್ಯೆಯರಲ್ಲಿ ಒಬ್ಬಳಾದ ಸೀತಾದೇವಿಯ ಪಾವಿತ್ರ್ಯವನ್ನು ಎಷ್ಟು ಕೊಂಡಾಡಿದರೂ ತೃಪ್ತಿಯಾಗದ ಸ್ವಾಮಿ ವಿವೇಕಾನಂದರು ಆಕೆಯ ಶೀಲಸೌರಭವನ್ನು ಈ ರೀತಿ ಬಣ್ಣಿಸುತ್ತಾರೆ: "ಸೀತಾದೇವಿಯ ಶೀಲದಷ್ಟು ಮತ್ತಾವ ಪೌರಾಣಿಕ ವ್ಯಕ್ತಿಯೂ ಇಡೀ ಹಿಂದೂ ಜನಾಂಗವನ್ನು ವ್ಯಾಪಿಸಿ, ಅವರ ನಿತ್ಯ ಜೀವನಕ್ಕೆ ಪ್ರವೇಶಿಸಿ, ಸಮಾಜದ ಪ್ರತಿಯೊಂದು ಧಮನಿಯಲ್ಲಿ ಅನುರಣಿತವಾಗಿಲ್ಲ. ಸ್ತ್ರೀಯಲ್ಲಿ ಯಾವುದು ಸ್ತ್ರೀತ್ವ ಎನ್ನುವೆವೋ ಅದೇ ಸೀತೆ" ಎನ್ನುವರು.

ಮತ್ತೊಂದು ಇತಿಹಾಸ ಕಾವ್ಯವಾದ ಮಹಾಭಾರತಕ್ಕೆ ಬಂದರೆ ಅಲ್ಲಿಯೂ ಆಧ್ಯಾತ್ಮಿಕ ಸ್ತ್ರೀಯರಿಗೇನೂ ಅಭಾವವಿಲ್ಲ. ಗಾಂಧಾರೀ, ಕುಂತಿ, ದ್ರೌಪದಿ, ದಮಯಂತಿ, ಸಾವಿತ್ರಿ, ಸುಲಭಾ, ಶಿವಾ, ಹೀಗೆ ಪಟ್ಟಿ ಬೆಳೆಯುತ್ತಾ ಬರುವುದು. 'ಸತ್ಯಮೇವ ಜಯತೇ' ಎಂಬುದರಲ್ಲಿನ ವಿಶ್ವಾಸವೇ ಇವರುಗಳ ಆಧ್ಯಾತ್ಮಿಕ ಜೀವನದ ಸುಭದ್ರ ಬುನಾದಿಯಾಯಿತು. ವೈವಾಹಿಕ ಜೀವನವು ಸ್ತ್ರೀಯರ ಆಧ್ಯಾತ್ಮಿಕ ಜೀವನಕ್ಕೆ ಬಾಧಕವಾಗುವ ಬದಲು ಸೋಪಾನವಾಯಿತು. ಕೌಶಿಕ ಮುನಿಯು ಕಾಡಿನಲ್ಲಿ ತನ್ನ ತಪಶ್ಶಕ್ತಿಯಿಂದ ಕೋಪಾಗ್ನಿಗೆ ಕಾಗೆಯನ್ನು ಆಹುತಿ ಮಾಡಿದ ಪ್ರಸಂಗವನ್ನು ಬ್ರಾಹ್ಮಣನ ಪತ್ನಿಯು ಮನೆಯಲ್ಲಿದ್ದೇ ಕೇವಲ ಪತಿಸೇವಾ ನಿಷ್ಠೆಯಿಂದಲೇ, ತನ್ನ ದಿವ್ಯದೃಷ್ಟಿಯಿಂದ ಅರಿತಳು! ಇಂತಹ ಸ್ತ್ರೀಯರೂ ಇದ್ದರು.

ರಾಜ ಶರ್ಯಾತಿಯ ಏಕಮಾತ್ರ ಪುತ್ರಿ ಸುಕನ್ಯಾ, ಸೌಂದರ್ಯದಲ್ಲಿ ಸೃಷ್ಟಿಕರ್ತನನ್ನೇ ಮೋಹಗೊಳಿಸುವಂತಿದ್ದಳು. ಯೌವನಾವಸ್ಥೆಯಲ್ಲಿ ಆಟವಾಡುತ್ತಾ, ಘೋರ ತಪಸ್ಸಿನಲ್ಲಿ ನಿರತನಾದ ಚ್ಯವನ ಋಷಿಯ ಕಣ್ಣುಗಳೆರಡನ್ನೂ ತಿವಿದು ಕುರುಡಾಗಿಸಿದ ಕಾರಣ ಆತನನ್ನೇ ವರಿಸಿದಳು. ಅರಮನೆಯ ಸುಖಸಂಪತ್ತುಗಳನ್ನೆಲ್ಲಾ ತೊರೆದು ಯೌವನದಲ್ಲಿ ಮುದುಕ, ಕುರುಡ ಪತಿಯ ಸೇವೆಯನ್ನು ಮಾಡಲು ಕಾಡಿಗೆ ಹೊರಟುನಿಂತಳು. ಆತನ ಬೇಕು, ಬೇಡಗಳನ್ನು ಅರುಹುವ ಮುನ್ನವೇ ಅರಿತು ಪೂರೈಸುತ್ತಾ, ತಾಯಿಯಂತೆ ಪತಿಯ ಸೇವೆ ಮಾಡಿದಳು! ದೇವತೆಗಳೂ ಈರ್ಷ್ಯೆ ಪಡುವಷ್ಟು ಉನ್ನತ ಮಟ್ಟಕ್ಕೆ ಬೆಳೆದು ನಿಂತಳು ಈ ವೈರಾಗ್ಯ ಶಿಖಾಮಣಿ.

ಮಿಥಿಲೆಯ ರಾಜನಾದ ಜನಕನ ಆಧ್ಯಾತ್ಮಿಕತೆಗೆ ಸವಾಲನ್ನು ಎಸಗುವಂತಹ ಸ್ತ್ರೀಯರೂ ಇದ್ದರು! ಪ್ರಧಾನ ರಾಜರ್ಷಿಯ ಏಕೈಕ ಪುತ್ರಿ ಸುಲಭಾ ಆಜೀವಪರ್ಯಂತ ಬ್ರಹ್ಮಚಾರಿಣಿಯಾಗಿ ತಪಸನ್ನಾಚರಿಸಿ ಅತ್ಯಂತ ಉನ್ನತಮಟ್ಟದ ಯೋಗಿನಿಯಾದಳು. ಜನಕರಾಜನ ಆಧ್ಯಾತ್ಮಿಕತೆಯನ್ನು ಪರೀಕ್ಷಿಸಲು ಸ್ವತಃ ಆತನ

ಆಸ್ಥಾನಕ್ಕೆ ಹೋಗಿ ತನ್ನ ಜ್ಞಾನ, ಸಿದ್ಧಿಗಳಿಂದ ಆತನನ್ನೇ ಬೆರಗಾಗಿಸಿದಳು! ವಿದ್ವತ್ತು, ಪಾಂಡಿತ್ಯ, ಜ್ಞಾನ, ತಪಸ್ಸುಗಳ ತವರಾದ ಮಿಥಿಲೆಯ ರಾಜನೇ ಸಂನ್ಯಾಸಿನಿ ಸುಲಭಾಳ ಆಧ್ಯಾತ್ಮಿಕ ಶ್ರೇಷ್ಠತೆಯ ಎದುರು ತನ್ನ ಸೋಲೊಪ್ಪಿಕೊಂಡನು.

ಕೇವಲ ಬ್ರಹ್ಮವಾದಿನಿಯರು, ಪತಿವ್ರತೆಯರೇ ಅಲ್ಲದೆ ಮಹಾರಾಣಿ ವಿದುಲಾಳಂತೆ ವೀರ ತಾಯಂದಿರನ್ನೂ ನಾವಿಲ್ಲಿ ಕಾಣಬಹುದು. ಯುದ್ಧದಲ್ಲಿ ಸೋಲೊಪ್ಪಿಕೊಂಡು ಬಂದು ಕುಳಿತ ಪುತ್ರನಿಗೆ ಹೇಡಿತನವನ್ನು ತ್ಯಜಿಸಿ ಯುದ್ಧದಲ್ಲಿ ಮತ್ತೊಮ್ಮೆ ಹೋರಾಡಿ ಜಯಗಳಿಸಲು ಪ್ರೋತ್ಸಾಹಿಸುವ ಆ ವಿಧವೆ ತಾಯಿ ವಿದುಲಾಳ ನುಡಿಗಳು ವೀರತ್ವದ ದ್ಯೋತಕ ವಾಗಿವೆ. ಪುತ್ರಶೋಕದ ಭಯವನ್ನೂ ಲೆಕ್ಕಿಸದೆ ಕರ್ತವ್ಯ ಪಾಲನೆಯ ಕರೆನೀಡಿದ ಇಂತಹ ಸ್ತ್ರೀಯರು ನಾರೀಕುಲಕ್ಕೇ ಕಲಶಪ್ರಾಯರು!

**ಪುರಾಣ ಯುಗ:** ಈ ಯುಗದಲ್ಲಿ ವರ್ಣಾಶ್ರಮ ಧರ್ಮವು ಹೆಚ್ಚು ಪ್ರಚಲಿತವಾಗಿದ್ದ ಕಾರಣ ಗೃಹಸ್ಥಧರ್ಮವೇ ಶ್ರೇಷ್ಠ ಧರ್ಮವೆನಿಸಿತು. ಅವಿವಾಹಿತ ಕನ್ಯೆಯರಿಗೆ ಹೆಚ್ಚು ಪ್ರೋತ್ಸಾಹವಿರಲಿಲ್ಲ. ಅಂತೆಯೇ ನಾವಿಲ್ಲಿ ಮದಾಲಸಾ, ದೇವಹೂತಿಯರಂತಹ ಶ್ರೇಷ್ಠ ತಾಯಂದಿರು, ಸತಿ, ಉಮಾ ಳಂತಹ ಪತಿವ್ರತೆಯರನ್ನೂ ಕಾಣಬಹುದು.

ಮಾರ್ಕಂಡೇಯ ಪುರಾಣದಲ್ಲಿ (೨೦-ಳಳ ಅಧ್ಯಾಯ ಗಳು) ಗಂಧರ್ವರಾಜ ವಿಶ್ವಾವಸುವಿನ ಪ್ರಸ್ತಾಪವಿದೆ. ಆತನಿಗೆ ರೂಪವತಿಯೂ, ಗುಣವತಿಯೂ ಆದ ಮದಾಲಸಾ ಎಂಬ ಪುತ್ರಿಯಿದ್ದಳು. ಋತಧ್ವಜನ ಕೈಹಿಡಿದ ಆಕೆಗೆ ತನ್ನ ನೈಜ ಸ್ವರೂಪದ ಜ್ಞಾನವಿತ್ತು. ತನಗೆ ಜನಿಸಿದ ಪುತ್ರರನ್ನು ಅಮೃತತ್ವದ ಜೋಗುಳ ಹಾಡುತ್ತಾ ಬೆಳೆಸುತ್ತಿದ್ದಳು. ಮಕ್ಕಳು ಬೆಳೆಯು ತ್ತಿರುವಂತೆ ಅಮೃತತ್ವದ ಮಾತುಗಳನ್ನೇ ಆಡುತ್ತಿದ್ದಳು. ತತ್ಪರಿಣಾಮವಾಗಿ, ಯುವರಾಜರೆಲ್ಲಾ ಬಾಲ್ಯಾವಸ್ಥೆ ಕಳೆದು ಯೌವನಾವಸ್ಥೆಗೆ ಕಾಲಿಡುವ ಮುನ್ನವೇ ಸಂಸಾರದ ನಶ್ವರತೆ ಯನ್ನು ಮನಗಂಡು ರಾಜ್ಯಭಾರ ಮಾಡುವ ಬದಲು ಸಂನ್ಯಾಸಾಶ್ರಮವನ್ನು ಸ್ವೀಕರಿಸಿದರು! ಹೀಗೆ ತಾಯಿಯೇ ತನ್ನ ಮಕ್ಕಳಿಗೆ ಬ್ರಹ್ಮವಿದ್ಯೆ ನೀಡುವ ಗುರುವಾದಳು.

ಕರ್ದಮ ಋಷಿಯ ಪತ್ನಿ ದೇವಹೂತಿಯು ಪತಿನಿಷ್ಠೆ ಯಿಂದ ವಿಷ್ಣುವನ್ನೇ ಮಗನನ್ನಾಗಿ ಪಡೆದ ಶ್ರೇಷ್ಠ ತಾಯಿ ಯೆನಿಸಿದಳು. ಆ ಮಗನೇ ಮುಂದೆ ಕಪಿಲ ಮಹಾಮುನಿ ಎನಿಸಿಕೊಂಡು ಷಡ್‌ದರ್ಶನಗಳಲ್ಲಿ ಒಂದಾದ ಸಾಂಖ್ಯ ಯೋಗದ ಸ್ಥಾಪಕಾಚಾರ್ಯನಾದನು!

**ಮಧ್ಯಯುಗ:** ಇತಿಹಾಸದಲ್ಲಿ ಬರುವ ಅನೇಕ ಆಧ್ಯಾತ್ಮಿಕ ಮಹಿಳೆ ಯರನ್ನು ಇಲ್ಲಿ ಮರೆಯಲು ಸಾಧ್ಯವಿಲ್ಲ. ಮೀರಾಬಾಯಿ, ಅಕ್ಕ ಮಹಾದೇವಿ, ಆಂಡಾಳ್, ಅವ್ವೈಯಾರ್ ಮುಂತಾದ ಮಹಿಳೆಯರು ಹಿಂದೂಧರ್ಮದ ಆಧ್ಯಾತ್ಮಿಕ ಪರಂಪರೆಯನ್ನು ಕಾಪಾಡಿದರು, ಶ್ರೀಮಂತಗೊಳಿಸಿದರು. ಇಂದಿಗೂ ಅವರ ರಚನೆಗಳು ಭಕ್ತಿದ್ಯೋತಕವಾಗಿವೆ, ಸಾಧಕರಿಗೆ ಸ್ಫೂರ್ತಿ ದಾಯಕವಾಗಿವೆ. ಸಾಮಾಜಿಕ ಕಟ್ಟಳೆಗಳನ್ನು ಮೀರಿನಿಂತು, ಆಧ್ಯಾತ್ಮಿಕ ಜೀವನವನ್ನು ಜನಸಾಮಾನ್ಯರಿಗೆ ಎಟುಕಿಸಿದ ಕೀರ್ತಿ ಇವರದು. ಸಮಾಜದ ಆಧ್ಯಾತ್ಮಿಕ ಬದುಕಿಗೆ ಈ ಸ್ತ್ರೀ-ಸಂತರ ವಿಶೇಷ ಕೊಡುಗೆಗೆ ದ್ಯೋತಕವಾದ ಯುಗ ಇದು.

**ಆಧುನಿಕ ಯುಗ:** ಆಧ್ಯಾತ್ಮಿಕತೆ ಇಲ್ಲದೆ ಮಹಿಳೆ ನಿಜವಾದ ತಾಯಿಯಾಗಲಾರಳು. ತನ್ನ ಕರುಳಿನ ಕುಡಿಗೆ ಎಲ್ಲವನ್ನೂ ನೀಡಬೇಕು ಎಂಬ ಭಾವನೆ ತ್ಯಾಗದಿಂದ ಮೂಡುತ್ತದೆ. ಮಹಿಳೆಯರಲ್ಲಿ ಭಾವನಾತ್ಮಕ ತಿಳುವಳಿಕೆ ಹೆಚ್ಚು. ಯಾವುದೇ ಸಮಸ್ಯೆಯನ್ನು ಪುರುಷನು ಬುದ್ಧಿವಂತಿಕೆ, ಚತುರತೆಗಳಿಂದ ಬಗೆಹರಿಸಿದರೆ, ಅದನ್ನೇ ಮಹಿಳೆ ತನ್ನ ಮಮತೆ, ಪ್ರೀತಿ, ಸ್ನೇಹ ಗಳ ಮೂಲಕ ಬಗೆಹರಿಸಲು ಪ್ರಯತ್ನಿಸುತ್ತಾಳೆ. ಎಲ್ಲರೂ ಬುದ್ಧಿ ಯಿಂದ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿ, ವಿಫಲರಾಗಿ ಯುದ್ಧ ಅನಿವಾರ್ಯ ಎಂದು ಸಿದ್ಧರಾಗುತ್ತಿದ್ದಾಗ ಕುಂತಿ ತನ್ನ ವಾತ್ಸಲ್ಯ ಭಾವನೆಗಳ ಮೂಲಕ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿದಳು. ಒಂದೇ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸ್ತ್ರೀ-ಪುರುಷರ ಮೆದುಳಿನ ಬೇರೆ ಬೇರೆ ಕೇಂದ್ರಗಳೇ ಕೆಲಸ ಮಾಡು ತ್ತವೆ ಎಂದು ಆಧುನಿಕ ವಿಜ್ಞಾನಿಗಳಿಂದ ತಿಳಿದುಬಂದಿದೆ.

ಆಧುನಿಕ ಯುಗದಲ್ಲಿನ ಪರಿಸ್ಥಿತಿಗಳು ತೀರ ಭಿನ್ನವಾಗಿವೆ. ಬಡತನ, ಕುಸಿದ ಆರ್ಥಿಕ ಸ್ಥಿತಿ, ಯುದ್ಧ ಮೊದಲಾದ ಅನೇಕ ಕಾರಣಗಳಿಂದಾಗಿ, ಇಡೀ ಮನುಕುಲ ಅನೇಕ ಸಂಕಷ್ಟ ಗಳಿಗೀಡಾಗಿದೆ. ಮಹಿಳೆಯ ಆಧ್ಯಾತ್ಮಿಕ ಸ್ರೋತದಿಂದ ಹರಿ ಯುವ ಪ್ರೀತಿ ವಾತ್ಸಲ್ಯಗಳಿಂದ ಮನುಕುಲ ಚೇತರಿಸಿಕೊಳ್ಳಬಹು ದುದಾಗಿದೆ. ಹತ್ತೊಂಬತ್ತನೇ ಶತಮಾನದಲ್ಲಿ ಶ್ರೀರಾಮಕೃಷ್ಣರ ಅವತರಣದ ಜೊತೆಜೊತೆಗೆ ಶ್ರೀಶಾರದಾದೇವಿಯವರಲ್ಲದೆ ಅನೇಕ ಸ್ತ್ರೀಭಕ್ತೆಯರಿಗೆ ಭರತಭೂಮಿ ಜನ್ಮವಿತ್ತಿತು. ಸಂಸಾರ ದಲ್ಲಿ ಹೇಗೆ ದುಃಖವನ್ನು ಸಹಿಸಬೇಕು ಎಂಬುದಕ್ಕೆ ಶ್ರೀಮಾತೆ ಯವರು ಆಧುನಿಕ ಯುಗದ ಸೀತೆಯಂತೆ ಇಡೀ ದೇಶಕ್ಕೆ ಮಾದರಿಯಾಗಿರುವರು. ಅವರು "ಕಮಲ ಪತ್ರದ ಮೇಲಿನ ನೀರಹನಿಯಂತೆ ಎಲ್ಲ ಕಡೆಯಲ್ಲೂ ಪ್ರಪಂಚವನ್ನು ಮುಟ್ಟಿ ದರೂ ಅದರ ಕಲುಷತೆ ಅವರಿಗೆ ಸೋಕುವುದೇ ಇಲ್ಲ. ಆದರೆ ಅವರು ಹಳೆಯ ಆದರ್ಶದ ಕೊನೆಯ ಪ್ರತಿನಿಧಿಯೋ ಅಥವಾ ಒಂದು ಹೊಸ ಆದರ್ಶದ ಅಗ್ರಗಾಮಿಯೋ" ಎಂಬ ಸೋದರಿ ನಿವೇದಿತಾಳ ಪ್ರಶ್ನೆ ಒಗಟಾಗಿಯೇ ಉಳಿಯುತ್ತದೆ.

ಹೀಗೆ ಆಧ್ಯಾತ್ಮಿಕತೆಯ ಸ್ರೋತವು ವೇದಗಳ ಕಾಲದಿಂದಲೂ ಸ್ತ್ರೀಯರಲ್ಲಿ ಹರಿದುಬರುತ್ತಿದೆ. "ಒಬ್ಬ ಆಚಾರ್ಯನು ಹತ್ತು ಉಪಾಧ್ಯಾಯರಿಗೆ ಸಮ; ಒಬ್ಬ ತಂದೆ ನೂರು ಆಚಾರ್ಯರಿಗೆ ಸಮ, ಆದರೆ ಒಬ್ಬಳು ತಾಯಿ ಸಾವಿರ ಜನ ತಂದೆಯರಿಗೆ ಸಮ" ಎಂಬ ಮನುವಿನ ನುಡಿಯನ್ನು ಸ್ಮರಿಸುತ್ತಾ ಪ್ರತಿಯೊಬ್ಬ ಮಹಿಳೆಯೂ ತನ್ನ ಅಂತರಂಗದಲ್ಲೇ, "ಸ್ತ್ರೀ ಅಬಲೆ ಹೇಗಾದಳು?" ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕಲಿ. *